# ವಾರ್ಡ್ ಸಭೆ ಸಂಖ್ಯೆ.38

ದಿನಾಂಕ:20.07.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1 ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (**ಅಧ್ಯಕ್ಷರು**)
2 ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (**ಕಾರ್ಯದರ್ಶಿ**)
3 ಶ್ರೀ ಜಯಪಾಲ್ ಸದಸ್ಯರು.
4 ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5 ಶ್ರೀಮತಿ ಪ್ರೇಮ ಸದಸ್ಯರು.
6 ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
7 ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈದ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
8 ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
9 ಶ್ರೀ ಛಾಯಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10 ಶ್ರೀ ಜಿ.ಕೆ ವೆಂಕಟೇಶಯ್ಯ, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
11 ಶ್ರೀಮತಿ ಸುನಿತ ವೈ ಆರ್, ಕಿರಿಯ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ ಕೊಳವೆ ಬಾವಿ),
12 ಶ್ರೀ ಶ್ರೀ ಮಂಜುನಾಥ್ ಕಂದಾಯ ವಸೂಲಿಗಾರರು ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
13 ಶ್ರೀ ನಂದಿನಿ ಲೇಔಟ್ ಪೋಲೀಸ್ ಠಾಣೆಯ ಸಿಬ್ಬಂದಿ ಸಭೆಗೆ ಹಾಜರಿದ್ದರು
14 ಶ್ರೀ ಬೀದಿ ದೀಪದ ಗುತ್ತಿಗೆದಾರರಾದ ಶ್ರೀ ಸತೀಶ್ ರವರು ವಾರ್ಡ್–44, ಮಾರಪ್ಪನಪಾಳ್ಯ
15 ಶ್ರೀ ಲೋಕೇಶ್ ಪಶುಸಂಗೋಪನ ಪರಿವೀಕ್ಷರು,
16 ಶ್ರೀ ಮಲ್ಲಯ್ಯ ರವರು ವಲಯ ಅರಣ್ಯಾ ಸಂರಕ್ಷಣೆ

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3 | ವಿಜಯಾನಂದನಗರದ ಸ್ಯಾನಿಟರಿ ಸಮಸ್ಯೆ ಈವರೆಗೂ ಪರಿಹಾರ ದೊರಕಿರುವುದಿಲ್ಲ ಆದ್ದರಿಂದ ಸಂಬಂದಪಟ್ಟವರಿಗೆ ಪತ್ರ ಬರೆಯಲು ಕೋರಿದರು. ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 4 | ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಐ ಮಾಸ್ಟ್‌ಗಳ ಲೈಟ್‌ಗಳ ಸಮಸ್ಯೆಗಳು ಬಗೆ ಹರಿದಿರುವುದಿಲ್ಲ ಆದ್ದರಿಂದ ಸಂಬಂದಪಟ್ಟವರಿಗೆ ಪತ್ರ ಬರೆಯಲು ಕೋರಿದರು. ಇದಕ್ಕೆ ಸಂಬಂಧಪಟ್ಟ ಇ.ಇ. ರವರಿಗೆ ತಿಳಿಸಿದು ಇ.ಇ. ರವರು ಮುಂದಿನ 15 ದಿನಗಳಲ್ಲಿ ಈ ಕೆಲಸ ಪೂರ್ಣಗೊಳಿಸಿ ಕೊಡುವುದಾಗಿ ಸಭೆಗೆ ತಿಳಿಸಿದರು. | ಬೀದಿ ದೀಪ ಇಲಾಖೆ |
| 5 | ಕಾರ್ಯದರ್ಶಿಗಳು ಕೋವಿಡ್‌ಗೆ ಸಂಬಂಧಿಸಿದ ಮಾಹಿತಿ ಕೋರಿದರು ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಸಭೆಗೆ ಮಾಹಿತಿಯನ್ನು ನೀಡಿದರು. ಇಲ್ಲಿಯವರೆಗೆ ಒಟ್ಟು 7424 ಕೊವಿಡ್ ಟೆಸ್ಟ್ ಮಾಡಿದು ಇದರಲ್ಲಿ RTPCR-5471, RAT-1953, TOTAL CASES-27, TOTAL DEATH-ZERO ಎಂದು ಸಭೆಗೆ ಮಾಹಿತಿ ನೀಡಿದರು | ಆರೋಗ್ಯ ವೈದ್ಯಾಧಿಕಾರಿಗಳು |
| 6 | ಡಾ॥ ನಾಗೇಂದ್ರ ಸದಸ್ಯರು ರವರು ಹಿಂದಿನ ಸಭೆಯಲ್ಲಿ ವ್ಯಾಕ್ಸಿನೇಷನ್ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪ್ರತಿ ಬುಧವಾರ ವಾಕ್ಸಿನೇಷನ್ ಮೇಳ ಹಮ್ಮಿಕೊಳ್ಳಲಾಗುತ್ತದೆ ಮತ್ತು 18 ವರ್ಷ ಮೇಲ್ಪಟ್ಟ ಎಲ್ಲಾರಿಗೂ ಬೂಸ್ಟರ್ ಡೋಸ್ ಹಾಕಲಾಗುವುದು ಎಂದು ಸಭೆಗೆ ಮಾಹಿತಿಯನ್ನು ನೀಡಿದರು. | – |

| | | |
|---|---|---|
| 7 | ಡಾ॥ ಶ್ರೀ ಶಶಿಕುಮಾರ್ ರವರು ಗೌತಮನಗರ ವ್ಯಾಪ್ತಿಯ ಆರೋಗ್ಯ ಕೇಂದ್ರಕ್ಕೆ ಪ್ರತಿ ದಿನ 10:00 ರಿಂದ 1:00 ಘಂಟೆಯವರೆಗೆ ಒಬ್ಬ ಸ್ಟಾಪ್ ನರ್ಸ್ ಮತ್ತು ಆಶಕಾರ್ಯಕರ್ತೆ ರವರುನ್ನು ನೇಮಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಮುಂದಿನ ಎರಡು ತಿಂಗಳುಗಳಲ್ಲಿ ವೈದ್ಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು | – |
| 8 | ಡಾ॥ ಶ್ರೀ ನಾಗೇಂದ್ರ ಸದಸ್ಯರು ರವರು ಬೋರ್‌ವೆಲ್‌ಗಳ ಬಗ್ಗೆ ಮಾಹಿತಿ ಕೋರಿದರು. ಶ್ರೀಮತಿ ಸುನಿತ ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ಕೊಳವೆ ಬಾವಿ ಉಪವಿಭಾಗ ರವರು ಲಭ್ಯವಿರುವ ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಮುಂದಿನ ತಿಂಗಳ ದುರಸ್ಥಿಯಾಗಿರುವ ಎಲ್ಲಾ ಪ್ಯಾನಲ್ ಗಳನ್ನು ದುರಸ್ಥಿ ಮಾಡಿಕೊಡುವುದಾಗಿ ಸಭೆಗೆ ತಿಳಿಸಿದರು | ಬಿ.ಡಬ್ಲ್ಯೂ.ಎಸ್. ಎಸ್.ಬಿ ಕೊಳವೆ ಬಾವಿ |
| 9 | ಶ್ರೀ ಜಯಪಾಲ್ ಸದಸ್ಯರು ರವರು ಗೌತಮನಗರದಲ್ಲಿ ಕಂಬ ಮನೆಯಮೇಲೆ ಬಾಗಿರುತ್ತದೆ ಅದನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಅಧಿಕಾರಿಗಳನ್ನು ಸ್ಥಳ ಪರಿಶೀಲನೆಗೆ ಕಳುಹಿಸಿ ಸದರಿ ಕಂಬ ತೆರವುಗೊಳಿಸಲು ಸೂಚಿಸಿ ಇದರ ಬಗ್ಗೆ ಸಭೆಗೆ ತಿಳಿಸಿದರು. | ಬೀದಿ ದೀಪದ ಅಧಿಕಾರಿಗಳಿಗೆ |
| 10 | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

**ಕಾರ್ಯಧರ್ಶಿ**

22/7/22

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ